# ಹಕ್ಕಿಗಳು ಸೊರ್ ಹಕ್ಕಿಗಳು

ಬಿಸಿಲನ್ನು ಮರೆಸುವಷ್ಟು ಮೋಹಕವಾದ ಪಕ್ಷಿಗಳಿಗೂ ರಾಯಚೂರು ನೆಲೆಯಾಗಿದೆ. ಹಕ್ಕಿಗಳ ಬಣ್ಣ–ಭಾವಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದೇ ಆದಲ್ಲಿ, ಸಹೃದಯರ ಮನದಲ್ಲಿ 'ತಂಪು ಇಂಪು ರಾಯಚೂರು' ನೆಲೆಗೊಂಡರೆ ಆಶ್ಚರ್ಯವೇನಿಲ್ಲ.

**ಈರಣ್ಣ ಬೆಂಗಾಲಿ**
ಚಿತ್ರಗಳು: ಸುಜಿತ್



ಬಿಸಿಲು ರಾಯಚೂರಿನ ಖ್ಯಾತಿಯೂ ಹೌದು, ಕುಖ್ಯಾತಿಯೂ ಹೌದು. ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ರಾಯಚೂರು–ಕಲಬುರ್ಗಿ ಎಂದಕೂಡಲೇ ನಾಡಿನ ಉಳಿದ ಭಾಗಗಳ ಜನರ ಕಣ್ಣೆದುರು ಬರುವುದು ಅಲ್ಲಿನ ಬಿಸಿಲು ಚಿತ್ರಗಳೇ. ಆದರೆ, ಬಿಸಿಲಿನಷ್ಟೇ ಸಮೃದ್ಧವಾಗಿ ಅಲ್ಲಿ ಬಹುತ್ವದ ಪರಂಪರೆ ಉಸಿರಾಡುತ್ತಿದೆ. ಅಷ್ಟು ಮಾತ್ರವಲ್ಲ, ಗಮನಿಸಿ ನೋಡಿದರೆ ಆ ಪ್ರಾಂತ್ಯಕ್ಕೇ ವಿಶಿಷ್ಟವಾದ ಪ್ರಾಕೃತಿಕ ಚೆಲುವನ್ನೂ ಕಾಣಬಹುದು. ಉದಾಹರಣೆಗೆ, ರಾಯಚೂರು ಪರಿಸರದಲ್ಲಿ ಕಾಣಿಸುವ ಪಕ್ಷಿಲೋಕ!

**ಬಿಸಿಲ ಬೆಳದಿಂಗಳ ಊರಲ್ಲಿ ಹಾರಾಡುವ ಹಾಡುಗಳು**

ಪಕ್ಷಿಲೋಕ ಎಂದಕೂಡಲೇ ನೀರು ಮತ್ತು ಕಾಡಿನೊಂದಿಗೆ ನಂಟುಳ್ಳ ಪ್ರದೇಶಗಳು ನೆನಪಾಗುತ್ತವೆ. ಆದರೆ, ರಾಯಚೂರಿನ ಬಿಸಿಲು ಬೆಳದಿಂಗಳ ಪರಿಸರದಲ್ಲೂ ಪಕ್ಷಿಲೋಕವೊಂದು ತಂತಾನೇ ರೂಪುಗೊಂಡಿದೆ. ಈ ಪಕ್ಷಿಲೋಕ ಯುವ ಛಾಯಾಗ್ರಾಹಕರ ಸಣ್ಣ ಪಡೆಯೊಂದನ್ನೂ ರಾಯಚೂರಿನ ಪರಿಸರದಲ್ಲಿ ಸೃಷ್ಟಿಸಿದೆ. ಪ್ರಭು ಗುಡಿಮನಿ, ವಿಶ್ವ, ಸಂಗಮೇಶ್, ನರೇಶ್, ಸುಧನ್ವ, ಶೈಲೇಶ್, ಜಮ್ಮುಮಿರ್ಜಾ, ಸುಜಿತ್ – ಇವರೆಲ್ಲ 'ಹಾರಾಡುವ ಹಾಡು'ಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಲೇ ಇದ್ದಾರೆ. ಅವರ ಚಿತ್ರಗಳು ರಾಯಚೂರಿನ ಕುರಿತ ನಮ್ಮ ನಂಬಿಕೆಗಳನ್ನು ಪುನರ್ ಪರಿಶೀಲಿಸಿಕೊಳ್ಳಲು ಒತ್ತಾಯಿಸುವಂತಿವೆ.

ಫ್ಲೆಮಿಂಗೊ, ಪೆಲಿಕಾನ್, ರೆಡ್ ನೆಕ್ಡ್ ಫಾಲ್ಕಾನ್, ಈಜಿಪ್ಷಿಯನ್ ವಲ್ಚರ್, ಬಾರ್ನ್ ಔಲ್, ಸ್ನೇಕ್ ಟೋಯೋಡ್ ಸ್ನೇಕ್ ಈಗಲ್, ಇಂಡಿಯನ್ ಕರ್ಸರ್, ಇಂಡಿಯನ್ ಪಿಟ್ಟ, ಮರಕುಟಿಗ, ಮಂಗಟ್ಟೆ, ಲಿಟಲ್ ರಿಂಗ್ಡ್ ಪ್ಲೋವರ್, ಸ್ಯಾಂಡ್ ಪೈಪರ್, ಸ್ಪೂನ್ ಬಿಲ್, ಇಂಡಿಯನ್ ನೈಟ್ ಜಾರ್, ಲೆಸ್ಸರ್ ಫ್ಲೆಮಿಂಗೊ, ಬ್ಲ್ಯಾಕ್ ಹೆಡೆಡ್ ಕುಕು ಸ್ಟ್ರೈಕ್, ಗೋಲ್ಡನ್ ಓರಿಯಲ್, ಸ್ಪಾಟೆಡ್ ಔಲೆಟ್, ಯೂರೋಪಿಯನ್ ರೋಲರ್, ಇಂಡಿಯನ್ ರೋಲರ್, ಇಂಡಿಯನ್ ಪ್ಯಾರಡೈಸ್ ಫ್ಲೈ ಕ್ಯಾಚರ್, ಪೆರಿಗ್ರೀನ್ ಫಾಲ್ಕಾನ್, ಪೈಡ್ ಹ್ಯಾರಿಯರ್, ಬ್ರಾಹ್ಮಿಣಿ ಕೈಟ್ – ಹೀಗೆ, ವಿವಿಧ ಪ್ರಭೇದದ ಪಕ್ಷಿಗಳು





